ಸ್ಥಾಪಿಸಲು ಸರ್ಕಾರ ಖಾಸಗೀ ಕಂಪನಿಗೆ ಅನುಮತಿ ನೀಡಿದೆ ಅದರಂತೆ ಕಪಿಲಾ/ಶಿಶಿಲ ಹೊಳೆಗೆ ಅಡ್ಡಲಾಗಿ ತಿರುವುನಾಲೆ ನಿರ್ಮಿಸಿ 9 00 ಮೆಗಾ ವ್ಯಾಟ್ ಸಾಮರ್ಥ್ಯದ ವಿದ್ಯುತ್ ಸ್ಥಾವರವನ್ನು ಸ್ಥಾಪಿಸಲು ಸರ್ಕಾರವು ಖಾಸಗೀ ಕಂಪನಿಯೊಂದಕ್ಕೆ ಅನುಮತಿ ನೀಡಿದೆ

ಆ) ಮೆರ್ಸ್ ಬೊಬ್ಬ ಪ್ರಾಜೆಕ್ಟ್ ಹಾಗೂ ಮೆಸರ್ಸ್ ಪರ್ಪಿಕಳ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗಳಿಗೆ ಸರ್ಕಾರವು ಅನುಮತಿ ನೀಡಿದೆ

ಇ) ನೇರಿಯಾ ಗ್ರಾಮದ ಹತ್ತಿರ ಇಲ್ಲಿಮನೆ, ಪುದಿಯಾ ಹಾಗೂ ಪೆರಾಜೆ ಎಂಬ ಕಿರುಜಲ ವಿದ್ಯುತ್ ಯೋಜನೆಗಳು ಹಂಚಿಕೆಯಾಗಿದ್ದು ಅಭಿವೃದ್ಧಿದಾರರು ಇನ್ನೂ ಈ ಕುರಿತಾಗಿ ವಿವರವಾದ ಸರ್ವೇಕ್ಷಣೆ ಮಾಡುತ್ತಲಿರುವರು

ಈ) ಯೋಜನೆಯ ಉದ್ದೇಶ ಕಿರು ಜಲ ವಿದ್ಯುತ್ ಯೋಜನೆ ಸ್ಥಾಪಿಸಿ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವುದು ಈ ಮೂರು ಕಿರು ಜಲ ವಿದ್ಯುತ್ ಯೋಜನೆಗಳು ತಲಾ 0 5 ಮೆಗಾ ವ್ಯಾಟ್ ಸಾಮರ್ಥ್ಯವುಳ್ಳದ್ದಾಗಿವೆ

ಉ) 1 ಬೊಬ್ಬರವರ 15 ಮೆಗಾ ವ್ಯಾಟ್ ಕಿರು ಜಲ ವಿದ್ಯುತ್ ಯೋಜನೆಯ ವಿಷವಾಗಿ ಸ್ಥಳೀಯರು ತಮ್ಮ ಫಲವತ್ತಾದ ಕೃಷಿ ಭೂಮಿ ಹಾಗೂ ತೀರ್ಥ ಸ್ಥಳ ಮುಳುಗುವುದಾಗಿ ಪ್ರತಿಭಟನೆ ವ್ಯಕ್ತಪಡಿಸಿದ್ದರು ಆದರೆ ಈ ಯೋಜನೆಯಿಂದ ಇಂತಹ ಯಾವುದೇ ಹಾನಿಯಾಗುವುದಿಲ್ಲ ಎಂದು ಯೋಜನೆಯ ಡಿ ಪಿ ಆರ್ ನಿಂದ ತಿಳಿದು ಬಂದಿದೆ

2 ಪರ್ಪಿಕಳ ಕಿರು ಜಲ ವಿದ್ಯುತ್ ಯೋಜನೆಯ ವಿಷಯವಾಗಿ ಯಾವುದೇ ಪ್ರತಿಭಟನೆ ಬಂದಿಲ್ಲ

3 ನೇರಿಯ ಗ್ರಾಮದ ಹತ್ತಿರ ಹಂಚಿಕೆಯಾಗಿರುವ ತಲಾ 0 5 ಮೆಗಾ ವ್ಯಾಟ್ ಸಾಮರ್ಥ್ಯದ ಇಲ್ಲಿಮನೆ ಪುದಿಯ ಹಾಗೂ ಪೆರಾಜೆ ಕಿರು ಜಲ ವಿದ್ಯುತ್ ಯೋಜನೆ ಬಗ್ಗೆ ಸ್ಥಳೀಯ ಗ್ರಾಮಸ್ಥರು ತಮ್ಮ ಜಮೀನಿಗೆ ನೀರಿನ ಸೌಕರ್ಯ ಇಲ್ಲವಾಗುತ್ತದೆ ಎಂದು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ ಆದರೆ ಇನ್ನೂ ಈ ಎಲ್ಲಾ ಯೋಜನೆಗಳ ವಿವರವಾದ ಸರ್ವೇಕ್ಷಣೆ ನಡೆಯುತ್ತಲಿದ್ದು ಇಂತಹ ಯಾವುದೇ ಆತಂಕಕ್ಕೆ ಆಸ್ಪದವಿಲ್ಲ ಆದರೆ ಯೋಜನೆಗಳಿಗೆ ಕರ್ನಾಟಕ ನವೀಕರಿಸಬಹುದಾದ ಇಂದನ ಅಭಿವೃದ್ಧಿ ನಿಯಮಿತ ಸಂಸ್ಥೆಯು ತಾಂತ್ರಿಕ ಅನುಮೋದನೆ ನೀಡುವಾಗ ಈ ಎಲ್ಲಾ ಅಂಶಗಳನ್ನು ಗಮನದಲ್ಲಿರಿಸಿ ಯೋಜನೆಗಳು ಪರಿಸರ ಸ್ನೇಹೀಯಾದಲ್ಲಿ ಮಾತ್ರ ಅನುಮೋದನೆ ನೀಡುವುದು

ದಾವಣಗೆರೆ ಸಮಗ್ರ ನೀರು ಸರಬರಾಜು ಯೋಜನೆಯ ಬಗ್ಗೆ

66 (115) ಶ್ರೀ ರವೀಂದ್ರನಾಥ್ ಎಸ್ ಎ (ಮಾಯಕೊಂಡ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದಾವಣಗೆರೆ ಸಮಗ್ರ ನೀರು ಸರಬರಾಜು ಯೋಜನೆ ಮುಗಿಯಲು ಇನ್ನು ಎಷ್ಟು ಕಾಲಾವಕಾಶ ಬೇಕಾಗಿದೆ

ಆ) ಯೋಜನೆ ಪ್ರಕಾರ ಆಗಿರುವ ಹಾಗೂ ಆಗಬೇಕಾಗಿರುವ ಕೆಲಸ ಎಷ್ಟು

ಇ) ಇದುವರೆಗೂ ಈ ಯೋಜನೆಗೆ ಮಾಡಿರುವ ವೆಚ್ಚ ಹಾಗೂ ಪೂರ್ಣವಾಗಲು ಬೇಕಾಗಿರುವ ಹಣ ಎಷ್ಟು?

ಶ್ರೀ ಎಸ್ ಎಂ ಕೃಷ್ಣ (ಮುಖ್ಯಮಂತ್ರಿಯವರು)

ಅ) ಸುಮಾರು 15 ದಿನಗಳಲ್ಲಿ ಯೋಜನೆಯು ಮುಗಿಯುತ್ತದೆ

ಆ) ಮೂಲಸ್ಥಾವರದ ಕಾಮಗಾರಿಗಳು, ಪೈಪ್ ಲೈನ್ ಕಾಮಗಾರಿಗಳು ಹಾಗೂ ಜಲಶುದ್ದೀಕರಣ ಘಟಕದ ಕಾಮಗಾರಿಗಳು 15 ಲಕ್ಷ ಲೀ ಸಾಮರ್ಥ್ಯದ ಜಲಸಂಗ್ರಹಾಗಾರ ಹಾಗೂ 13 ಮೇಲ್ಮಟ್ಟದ ಜಲಸಂಗ್ರಹಾಗಾರದ ನಿರ್ಮಾಣ ಪೂರ್ಣಗೊಂಡಿದ್ದು ನಗರದ ಪ್ರದೇಶದಲ್ಲಿ ವಿತರಣಾ ಕೊಳವೆ ಮಾರ್ಗಗಳನ್ನು ಅಳವಡಿಸುವ ಕಾಮಗಾರಿಗಳು ಬಾಕಿ ಇರುತ್ತದೆ ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು ಸುಮಾರು 6 ತಿಂಗಳ ಕಾಲಾವಕಾಶ ಬೇಕಾಗಿರುತ್ತದೆ

ಇ) ಈ ಯೋಜನೆಯ ಮಂಜೂರಾದ ಅಂದಾಜು ರೂ 40 09 ಕೋಟಿಗಳು ಯೋಜನೆಗೆ ನವೆಂಬರ್ 2003ರ ವರೆಗೆ ರೂ 33 5592 ಕೋಟಿ ವೆಚ್ಚವಾಗಿರುತ್ತದೆ ಹಾಗೂ ಬಾಕಿ ಇರುವ ಕಾಮಗಾರಿಗಳಿಗೆ ಸುಮಾರು ರೂ 6 00 ಕೋಟಿಗಳು ಬೇಕಾಗಿರುತ್ತದೆ

ರಾಜ್ಯದ ಸಣ್ಣ ಕೈಗಾರಿಕಾ ಸಚಿವರ ಮುಂಬೈ ಪ್ರವಾಸದ ಬಗ್ಗೆ

68 (200) ಶ್ರೀ ಸದಾನಂದ ಗೌಡ ಡಿ ವಿ (ಪುತ್ತೂರು) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಾಲಿ ರಾಜ್ಯದ ಕೈಗಾರಿಕಾ ಸಚಿವರು 2000–01 ರಿಂದ 2003–04 ರವರೆಗೆ ಎಷ್ಟು ಬಾರಿ ಮುಂಬೈಗ ಹೋಗಿರುತ್ತಾರೆ (ಪ್ರಯಾಣಿಸಿದ ದಿನಾಂಕದ ವಿವರ ನೀಡಿ) ಮುಂಬೈನಲ್ಲಿ ಇವರು ಉಳಿದುಕೊಂಡಿದ್ದ ಹೋಟಲ್‌ನ ಹೆಸರೇನು ಯಾವ ಕಾರಣಕ್ಕಾಗಿ ಇವರು ಮುಂಬೈಗೆ ಹೋಗಿದ್ದರು (ವಿವರ ನೀಡಿ)

ಶ್ರೀ ಎಸ್ ಎಂ ಕೃಷ್ಣ (ಮುಖ್ಯಮಂತ್ರಿಯವರು)

ಅ) 2000–01 ರಿಂದ 2003–04 ರವರೆಗೆ ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಮುಂಬೈಗೆ 13 ಬಾರಿ ಹೋಗಿರುತ್ತಾರೆ ಅವರು ಮುಂಬೈಗೆ ಪ್ರಯಾಣಿಸಿದ ದಿನಾಂಕಗಳು ಮತ್ತು ಉದ್ದೇಶಗಳನ್ನೊಳಗೊಂಡ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ

ಸಚಿವರುಗಳು ಅಂತರರಾಜ್ಯ ಪ್ರವಾಸ ಕೈಗೊಂಡಾಗ ಆಯಾ ರಾಜ್ಯಗಳೇ ಶಿಷ್ಟಾಚಾರ ಸೌಲಭ್ಯ ನೀಡುವುದರಿಂದ, ಅವರು ಎಲ್ಲಿ ತಂಗಿದ್ದರು ಎಂಬ ಬಗ್ಗೆ ವಿವರ ಲಭ್ಯವಿರುವುದಿಲ್ಲ

ANNEXURE

DATES OF TRAVEL OF THE HON'BLE MINISTER FOR SMALL SCALE INDUSTRIES AND HAJ TO MUMBAI FROM 2000-2001 TO 2003-2004

DATE	PURPOSE OF VISIT
1	2
04 04 2000	To hold discussions with the Officers of the Central Haj Committee
29 04 2000	-do-